ನಿನ್ನೆಮೊನ್ನೆಯವರೆಗೂ, 'ಏನು, ಸುಮ್ಮನೆ ಪಾರ್ಟಿಯಾ? ಇಲ್ಲಾ, ಏನಾದರೂ ಅಕೇಶನ್ನಾ?' ಎಂದು ನೆನಪಾದಾಗಲೆಲ್ಲ ಕುತೂಹಲಿಸಿ ಕೇಳುತ್ತಿದ್ದ. 'ಫಾರ್ಮಲಾಗಿ ಹೋಗಬೇಕಾ? ಟ್ರೆಡೀಶನಲಾಗಿ ತೊಡಬೇಕಾ? ಈ ಬಗ್ಗೆ ಏನಾದರೂ ಕೇಳಿದೆಯಾ? ಏನಾದರೂ ಡ್ರೆಸ್‌ಕೋಡ್ ಇದೆಯಾಂತ ವಿಚಾರಿಸಿದೆಯಾ?' ಎಂದೆಲ್ಲ ದುಂಬಾಲಿಗೆ ಬಿದ್ದು ಕೆದಕಿದ್ದ. 'ನಾನಂತೂ ಫ್ಯಾಬ್ ಇಂಡಿಯಾ ಕುರ್ತಾ ತೊಡುತೀನಿ... ನೀನು ಬೆಂಗಾಲ್ ಕಾಟನ್ ಉಟ್ಟುಕೋ, ಆಯಿತಾ? ಇಬ್ಬರಿಗೂ ಹೊಂದಿಬರುತ್ತೆ...' ಎಂದು ನಿನ್ನೆ ರಾತ್ರಿಯೂ ಹೇಳಿ ಖುಷಿಸಿದ್ದ. ಆದರೆ ಇವೊತ್ತು ಬೆಳಿಗ್ಗೆಗೆಲ್ಲ ಪ್ಲೇಟು ಬದಲಿತ್ತು! 'ಕಂಡು ಗೊತ್ತಿರದವರೊಡನೆಯ ಕೂಟ... ಯಾರೂ ಸರಿಯಾಗಿ ಮಾತಿಗೆ ಸಿಗದಿದ್ದರೇನು ಮಾಡೋದು, ಮೋದ್?' ಎಂದು ಅಗದಿ ನಸುಕಿಗೆಲ್ಲ ಚಹಾಭಿರಾಮದ ನಡುವೆ ಅಳುಕಿದ್ದ. ಹೀಗೆ ಸುರುಗೊಂಡ ಸಾಧಾರಣ ಸಂಕೋಚ ಮಧ್ಯಾಹ್ನದ ಹೊತ್ತಿಗೆಲ್ಲ, ನಿರಾಕರಣೆಯಾಗಿ ಊರಿಕೊಂಡಿತ್ತು. 'ಯಾರೂ ಗೊತ್ತಿರದ ಜನ, ಮೋದ್... ಅದೇ ಹಿಂಜರಿಕೆ... ನೀನೊಬ್ಬಳೇ ಹೋಗಿ ಬರೋದಲ್ಲವಾ?!' ಎಂದು ಸಾರಿ ಸಾರಿ ಆಡಿದ. ಅವನನ್ನು ಒಪ್ಪಿಸಿ, ಅಣಿಗೊಳಿಸಿ ಕಾರೊಳಕ್ಕೂರಿಸುವುದು – ಕಡೆಗೂ ಹರಸಾಹಾಸವೇ ಆಯಿತು!

ಮಧುಕರಿಯನ್ನು ಮತ್ತೊಮ್ಮೆ ಸಂಬಳಿಸಿ, 'ಇಲ್ಲೀವರೆಗೆ ಬಂದಿದ್ದಾಯಿತು... ಹಾಗೇ ವಾಪಸು ಹೋದರೆ ಅಲೇಕ್ಸ್ಯನಿಗೆ ಬೇಜಾರಾಗುತ್ತೆ... ಇದು ಸೌಜನ್ಯ ಅಲ್ಲ...' ಅಂತೆಲ್ಲ ಹೇಳಿ, ಮುಂದಿನ ಸಂಗತಿಗೆ ಅವನನ್ನು ಮತ್ತೊಮ್ಮೆ ಅಣಿಗೊಳಿಸುವುದಾಯಿತು. ಜ್ಯಾಕಲಿನ್‌ಳೊಡನೆ ಮತ್ತಷ್ಟು ದೇಶಾವರಿ ಪಲುಕಿ, ಮುಮ್ಮನೆಯಿಂದ ಬೀಳ್ಕೊಳ್ಳುವ ಸುಮಾರಿಗೆ ಹತ್ತಾರು ಮಿನಿಟುಗಳು ಸಂದವು. ಅಲ್ಲಿಂದ ಪಡಸಾಲೆಗೆ ದಾರಿ ಹೊಂಚುವಷ್ಟರಲ್ಲಿ, ಮಧುಕರಿ 'ಬರೋಬ್ಬರಿ ಐವತ್ತೆರಡು ಜೊತೆ ಫುಟ್‌ವೇರಿದ್ದವು... ಅಂದರೆ ಐವತ್ತೆರಡು ಮಂದಿ ಬಂದಿದ್ದಾರೆ ಅಂತಾಯಿತು. ನಾವೂ ಸೇರಿ ಐವತ್ತನಾಲ್ಕು...' ಅಂತಂದ! ಅದಾವ ಮಾಯದಲ್ಲಿ ಈ ಗಂಡ ಮಹಾಶಯ ಚಪ್ಪಲಿಯೆಣಿಸಿದನೋ, ಯಾರಿಗೆ ಗೊತ್ತು?! ಆಶ್ಚರ್ಯವಾಯಿತಾದರೂ ಸುಮ್ಮಗೆ ನಕ್ಕೆ. 'ಸಣ್ಣ ಕೂಟ ಅಂತಿದ್ದನಲ್ಲ, ಮೋದ್... ನನಗೇಕೋ ಸರಿಯನಿಸುತ್ತಿಲ್ಲ...' ಅಂತ ಅನುಮಾನವನ್ನು ಮುಂದುವರೆಸಿದ. ಅರೆ ಛುಪ್ಪ್... ಅಂತಂದು ಗದರಿ ಮುನ್ನಡೆದೆ.

★★★

ಅಲೇಕ್ಸ್ಯನ ನಿಜದ ಹೆಸರು ಅಲೆಕ್ಸ್. ಅಲೆಕ್ಸ್ ವಿತ್ತಾಲೆ ಸಾಜನ್ ಪೂರ್ತಿ ಹೆಸರು. ಮಲಯಾಳೀ ಕ್ರಿಶ್ಚಿಯನ್ನು. ಕಲ್ಲಿಕೋಟೆಯ ಕಡೆಯ ಮೂಲ. ಹುಟ್ಟಾ ಕಟ್ಟಾ ಬೆಂಗಳೂರಿಗ. ಮದುವೆಯಾಗಿಲ್ಲ. ಯಾಕೆಂದು ನಾನೆಂದೂ ತಲೆಕೆಡಿಸಿಕೊಂಡಿಲ್ಲ. ಒಂದಷ್ಟು ಅಫೇರುಗಳಿವೆಯೆಂದೂ, ತಾನೇ ಮುತುವರ್ಜಿ ತಾಳಿ ಒಮ್ಮನಸ್ಸು ಹೂಡಿದ ಪ್ರೀತಿಯೊಂದು ಫಲಿಸಲಿಲ್ಲವೆಂದೂ, ಈ ನಲವತ್ತೈದನೇ ವಯಸ್ಸಿಗೂ ಹರೆಯದ ಹೆಣ್ಣುಗಳ ಶೋಕಿಯಿದೆಯೆಂದೂ... ಅಲ್ಲಲ್ಲಿ ಕೇಳಪಟ್ಟಿದ್ದೇನೆ. ಅದು ಅವನ ಪಾಲಿನ ಸ್ವಂತವೆಂದು, ನನ್ನ ಮಟ್ಟಿಗೆ ಖಡಕ್ಕಾಗಿ ಪರಕೀಯವೆಂದು – ಕೇಳಿದ್ದನ್ನು ಕಿವಿಯಾಚೆಗೇ ಮಿಗಿಸಿ ಸದಾ ಮುಂಜರುಗಿದ್ದೇನೆ. ಅಲೇಕ್ಸ್ಯ, ಇಂದಿರಾನಗರದಲ್ಲಿ ಬೆಳೆದು, ಸೇಂಟ್ ಜೋಸೆಫ್ಸ್‌ನಲ್ಲಿ ಓದಿದ್ದಾನಾದರೂ – ಇಂಥದೇ ಹಿನ್ನೆಲೆಯಿಂದ ಬಂದ ಬೇರೆಯವರಿಗಿಂತ, ತೀರಾ ತೀರಾ ವಿಭಿನ್ನ. ಇಪ್ಪತ್ತೆಂಟು ವರ್ಷಗಳಿಂದ ಬೆಂಗಳೂರಿನಲ್ಲಿ ನೆಲೆಸಿರುವ ನಾನು ಮತ್ತು ಮಧುಕರಿಗೆ ಹೋಲಿಸಿದರಂತೂ ಎಷ್ಟೋ ಚೆನ್ನಾಗಿ ಕನ್ನಡವಾಡುತ್ತಾನೆ. ನನ್ನೊಡನೆ ಯಾವೊತ್ತೂ ಕನ್ನಡದಲ್ಲಿಯೇ ವ್ಯವಹಾರ... ನನಗೂ ಅವನಿಗೂ ಪರಿಚಯವೇರ್ಪಟ್ಟಿದ್ದು ಒಟ್ಟೇ ಕೆಲಸಕ್ಕಿದ್ದ